ದಿನಾಂಕಃ 19-08-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ದಾವಾ ಸ್ವತ್ತನ್ನು ಖರೀದಿಸಲು ನಾನು ರೂ.2000/- ನೀಡಿರುತ್ತೇನೆ ಮತ್ತು 3 ರಿಂದ 5 ನೇ ಪ್ರತಿವಾದಿಯರು ತಲಾ ರೂ.1000/- ನೀಡಿರುತ್ತಾರೆ ಎಂದು ತೋರಿಸಲು, ದಾಖಲೆಯನ್ನು ನೀಡಿಲ್ಲ. ಈ ರೀತಿ ಹಣ ಕೊಟ್ಟ ಬಗ್ಗೆ ನನ್ನ ತಂದೆಯಿಂದ ಯಾವುದೇ ಪತ್ರ ಬರೆಸಿಕೊಂಡಿಲ್ಲ. ಸಾಕ್ಷಿ ಮುಂದುವರೆದ ತಂದೆ ತಾಯಿ ಮೇಲೆ ವಿಶ್ವಾಸ ಇದ್ದ ಕಾರಣ ಆ ರೀತಿ ಪತ್ರ ಬರೆಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು 3 ರಿಂದ 5 ನೇ ಪ್ರತಿವಾದಿಯರು ದಾವಾ ಸ್ವತ್ತು ಖರೀದಿಸಲು ಹಣ ನೀಡಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಒಂದುವೇಳೆ ನಾವು ಹಣ ನೀಡಿದ್ದರೆ ತಂದೆ ಕಡೆಯಿಂದ ಪತ್ರ ಬರೆಸಿಕೊಳ್ಳುತ್ತಿದ್ದೆವು ಎಂದರೆ ಸರಿ ಅಲ್ಲ ದಿಃ 05-06-1992 ರಂದು ಹಣ ನೀಡಿದ್ದೇವೆ. ಆಗ ನನ್ನ ತಂದೆ ತಾಯಿ ಮತ್ತು ಅಣ್ಣ, ತಮ್ಮಂದಿರು, ಅಕ್ಕ ತಂಗಿಯರು ಇದ್ದರು. ಅದೇರೀತಿ ನಾರಾಯಣಪ್ಪರವರು ಇದ್ದರು. ನಾರಾಯಣಪ್ಪರವರು ನಿವೇಶನದ ಮೊದಲಿನ ಮಾಲೀಕರು. ನಾರಾಯಣಪ್ಪರವರಿಗೆ ಹಣ ಪಡೆದುಕೊಂಡ ಬಗ್ಗೆ ರಶೀದಿ ತಯಾರಿಸಿಕೊಡಿ ಎಂದು ನಾನು ಕೇಳಿಲ್ಲ.

ದಾವಾ ಸ್ವತ್ತನ್ನು ಖರೀದಿಸುವ ಮೊದಲು ನಾವೆಲ್ಲರೂ ನೀರಾವರಿ ಇಲಾಖೆಯ ವಸತಿ ಗೃಹದಲ್ಲಿ ಇದ್ದೆವು ಎಂದರೆ ಸರಿ. ಆ ವಸತಿ ಗೃಹದಲ್ಲಿ ನನ್ನ ತಂದೆ ಕಿರಾಣಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದರೆ, ಅವರು ಸಾಮಾನು ತಂದು ಹಾಕುತ್ತಿದ್ದರು, ನಾನು ಮತ್ತು ನನ್ನ ಅಕ್ಕ ತಂಗಿಯರು ಸೇರಿ ವ್ಯಾಪಾರ ಮಾಡುತ್ತಿದ್ದೇವು 1992 ರಲ್ಲಿ ಅಂಗಡಿ ಮುಚ್ಚಿ ಹೋಗಿತ್ತು. ಅದೇ ಸಂದರ್ಭದಲ್ಲಿ ನಮ್ಮ ತಂದೆ ರಾಯಚೂರಿನಿಂದ ಪಾತ್ರೆಗಳನ್ನು ತಂದು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಕಿರಾಣಿ ವ್ಯಾಪಾರದಿಂದ ಮತ್ತು ಪಾತ್ರೆಗಳ ವ್ಯಾಪಾರದಿಂದ ಬಂದ ಆದಾಯ ನಮ್ಮ ತಂದೆಯ ಬಳಿ ಇತ್ತು ಎಂದರೆ ಸರಿ.

ನಮ್ಮ ತಂದೆ ನಮ್ಮ ಸಮಾಜದ ಇಸ್ತಮಾ, ಶ್ರಮ ಮತ್ತು ಓದಿಕೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆದರೆ ಯಾವುದೇ ಪ್ರತಿಫಲ ಪಡೆಯುತ್ತಿರಲಿಲ್ಲ. ಅದೇರೀತಿ ನಮ್ಮ ತಂದೆ ಮಸೀದಿಯಲ್ಲಿ ನಮ್ಮ ಸಮಾಜದ ಮಕ್ಕಳಿಗೆ ಅರಬಿಕ್ ಪಾಠ ಮಾಡುತ್ತಿದ್ದರು ಎಂದರೆ ಸರಿ. ಅದೇರೀತಿ ನಮ್ಮ ತಂದೆ ವಸತಿ ಗೃಹದಲ್ಲಿ ಇದ್ದಾಗ ಅಲ್ಲಿ ಬಂದ ಮಕ್ಕಳಿಗೆ ಅರೆಬಿಕ್ ಪಾಠ ಹೇಳಿ ಕೊಡುತ್ತಿದ್ದರು ಎಂದರೆ ಸರಿ ಅಲ್ಲ. ನಾನು ಹೇಳಿ ಕೊಡುತ್ತಿದ್ದೆ.

ಸಾಮಾನ್ಯವಾಗಿ ಒಬ್ಬ ಸರ್ಕಾರಿ ನೌಕರನು ಒಂದು ಮನೆ ಅಥವಾ ನಿವೇಶನ ಖರೀದಿ ಮಾಡುವ ಸಾಮರ್ಥ್ಯ ಹೊಂದಿರುತ್ತಾನೆ ಎಂದರೆ ಸರಿ.

ನಾನು 2008 ನೇ ಸಾಲಿನಲ್ಲಿ ನೌಕರಿ ಮಾಡುತ್ತಿದ್ದೆ. 2008 ನೇ ಸಾಲಿನಲ್ಲಿ 3 ರಿಂದ 5 ನೇ ಪ್ರತಿವಾದಿಯರಿಗೆ ತಿಳುವಳಿಕೆ ಮಟ್ಟ ಚೆನ್ನಾಗಿ ಇತ್ತು. ನಮಗೆ ಸಂಬಂಧಪಟ್ಟ ಯಾವುದಾದರೂ ದಾಖಲೆಯನ್ನು ತಯಾರಿಸಿದರೆ ಸಾಮಾನ್ಯವಾಗಿ ಓದಿ ಸಹಿ ಮಾಡುತ್ತೇವೆ. ಯಾವುದಾದರೂ ಆಸ್ತಿ, ಹಣ ಮತ್ತು ಇತರೆ ವಸ್ತು ಆ ದಾಖಲೆಯ ಮೂಲಕ ನಮಗೆ ಬರುವದಿದ್ದರೆ ಅವುಗಳನ್ನು ಪಡೆದುಕೊಂಡು ಸಹಿ ಮಾಡುತ್ತೇವೆ ಎಂದರೆ ಸರಿ.

ಹಿರಿಯ ಶ್ರೇಣಿ ನ್ಯಾಯಾಲಯ ಲಿಂಗಸಗೂರು ಪೀಠ ಸಿಂಧನೂರಿನಲ್ಲಿ ಅಸಲು ದಾವಾ ನಂ. 53/2008 ನ್ನು ಪಾಲುವಿಭಾಗಕ್ಕಾಗಿ ಸಲ್ಲಿಸಿದ್ದೇವು ಎಂದರೆ ಸರಿ. ಈ ದಾವೆಯ ಎಲ್ಲ ಪಕ್ಷಗಾರರು ಆ ದಾವೆಯ ಪಕ್ಷಗಾರರು ಇದ್ದರು ಎಂದರೆ ಸರಿ. ಆ ದಾವೆಯನ್ನು ನಾವು ನ್ಯಾಯಾಲಯದ ಹೊರಗಡೆ ರಾಜಿ ಮಾಡಿಕೊಂಡಿದ್ದೇವೆ ಎಂದು ಹೇಳಿ ಮೆಮೊ ಸಲ್ಲಿಸಿ ವಜಾ ಮಾಡಿಕೊಂಡಿದ್ದೇವೆ ಎಂದರೆ, ರಾಜಿ ಮಾಡಿಕೊಳ್ಳುತ್ತೇವೆ ಎಂದು ಹೇಳಿ ವಜಾ ಮಾಡಿಕೊಂಡಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ರಾಜಿ ಮಾಡಿಕೊಳ್ಳುತ್ತೇವೆ ಎಂದು ಹೇಳಿ ಆ ಮೆಮೊದಲ್ಲಿ ಬರೆದಿಲ್ಲ ಎಂದರೆ, ಅದರ ಬಗ್ಗೆ ನನಗೆ ಕನಫ್ಯೂಜ್ ಆಗಿದೆ. ನ್ಯಾಯಾಲಯದ ಹೊರಗಡೆ ಮಾಡಿಕೊಂಡ ರಾಜಿಯಂತೆ ನನಗೆ ಬರಬೇಕಾದ ಭಾಗವನ್ನು ಪಡೆದುಕೊಂಡೆ ಮೆಮೊಗೆ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ಅದಕ್ಕೆ ಸಹಿ ಮಾಡುವಾಗ ನನಗೆ ಬರಬೇಕಾದ ಭಾಗವನ್ನು ಕೊಟ್ಟರೆ ಸಹಿ ಮಾಡುತ್ತೇನೆ ಎಂದು ನಾನು ಹೇಳಿರಲಿಲ್ಲ. ನನ್ನ ಭಾಗದ ಬದಲಾಗಿ ಹಣ ಪಡೆದುಕೊಂಡಿದ್ದರಿಂದ ನಾನು ಆ ರೀತಿ ಕೇಳಿಲ್ಲ ಎಂದರೆ ಸರಿ ಅಲ್ಲ. ಅಸಲು ದಾವಾ ನಂ. 53/2008 ರಲ್ಲಿ ನನಗೆ ಬರಬೇಕಾದ ಭಾಗ ಬಂದಿದ್ದರಿಂದ ನಾವು ಮೆಮೊ ಸಲ್ಲಿ ಆ ದಾವೆಯನ್ನು ವಜಾ ಮಾಡಿಕೊಂಡಿದ್ದೇವೆ ಎಂದರೆ ಸರಿ ಅಲ್ಲ. ಆ ದಾವೆಯಲ್ಲಿ ನಾನು 3 ನೇ ವಾದಿ ಇದ್ದೆ ಎಂದರೆ ಸರಿ. ನಾನೇ ಆ ದಾವೆಯಲ್ಲಿ ಹೇಳಿ ಬರೆಸಿ, ಓದಿ ಹೇಳಿ ಎಲ್ಲರೂ ಸಹಿ ಮಾಡಿದ್ದೇವೆ ಎಂದರೆ, ಎಲ್ಲರೂ ಸ್ವ ಇಚ್ಚೆಯಿಂದಲೇ ಸಹಿ ಮಾಡಿದ್ದೇವೆ.

ನಮ್ಮ ತಂದೆಗೆ ನೌಕರಿ ಇತ್ತು ಅವರಿಗೆ ಬಂದ ಸಂಬಳದಿಂದಲೇ ದಾವಾ ಸ್ವತ್ತನ್ನು ಸ್ವತಃ ಖರೀದಿಸಿದ್ದಾನೆ ಎಂದರೆ ಸರಿ ಅಲ್ಲ. ದಾವಾ ಸ್ವತ್ತಿನಲ್ಲಿ 1997 ರಲ್ಲಿ ಮನೆ ಕಟ್ಟಲು ಪ್ರಾರಂಭಿಸಿದ್ದೆವು ಎಂದರೆ ಸರಿ ಅಲ್ಲ. ಮೊದಲೇ ಮನೆ ಕಟ್ಟಲಾಗಿತ್ತು. 1992 ರಿಂದ 1994 ರ ಅವಧಿಯಲ್ಲಿ ಮನೆ ಕಟ್ಟಿದ್ದೇವೆ. ಆಗ ಕಟ್ಟಡ ಪರವಾನಿಗೆ ನಮ್ಮ ತಂದೆ ಪಡೆದುಕೊಂಡಿರಬಹುದು. ಕಟ್ಟಡ ಪರವಾನಿಗೆ ಇದ್ದರೆ ಮಾತ್ರ ಮನೆ ಕಟ್ಟಲು ಸಾಧ್ಯ ಇಲ್ಲವಾದರೆ ಇಲ್ಲ ಎಂದರೆ ಸರಿ . ಆ ಅವಧಿಯಲ್ಲಿ ನಮ್ಮ ತಂದೆ ಕಟ್ಟಡ ಪರವಾನಿಗೆ ಪಡೆದ ಬಗ್ಗೆ ದಾಖಲೆ ಸಲ್ಲಿಸಿಲ್ಲ. 1997 ರಲ್ಲಿ ಕಟ್ಟಡ ಪರವಾನಿಗೆ ಪಡೆದು ಮನೆ

ಕಟ್ಟಿದ್ದರಿಂದ ನಾವು ಆ ಪರವಾನಿಗೆಯನ್ನು ಹಾಜರಪಡಿಸಿಲ್ಲ. ಮನೆ ಕಟ್ಟುವಾಗ ನಮ್ಮ ಭಾಗ ಕೊಟ್ಟು ಮನೆ ಕಟ್ಟಿ ಎಂದು ನಾವು ತಕರಾರು ಮಾಡಿಲ್ಲ. ದಾವಾ ಸ್ವತ್ತು ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತು ಇರುವ ಕಾರಣ ನಾವು ತಕರಾರು ಮಾಡಿಲ್ಲ ಎಂದರೆ ಸರಿ ಅಲ್ಲ.

ನಮ್ಮ ತಂದೆ ದಾವಾ ಸ್ವತ್ತಿನಲ್ಲಿದ್ದ ತನ್ನ ಅರ್ಧ ಭಾಗವನ್ನು ನೋಂದಾಯಿತ ದಾನಪತ್ರದ ಮೂಲಕ 2 ನೇ ಪ್ರತಿವಾದಿಗೆ ಕೊಟ್ಟಿದ್ದಾನೆ ಎಂದರೆ, ನನಗೆ ಗೊತ್ತಿಲ್ಲ, ನಮಗೆ ಗೊತ್ತಾಗದಂತೆ ಮಾಡಿದ್ದಾರೆ. ಈ ವಿಚಾರ ನನಗೆ 2014 ರಲ್ಲಿ ಗೊತ್ತಾಗಿದೆ. ಮ್ಯೂಟೇಶನ ಮಾಡಲು 1 ಮತ್ತು 2 ನೇ ಪ್ರತಿವಾದಿಯರು ಓಡಾಡುತ್ತಿದ್ದಾಗ ಮುನಿಸಿಪಾಲಟಿಯಲ್ಲಿ ನಮಗೆ ಗೊತ್ತಾಗಿದ್ದರಿಂದ ತಕರಾರು ಸಲ್ಲಿಸಿದ್ದೆವು. ತಕರಾರು ಸಲ್ಲಿಸಿದ ನಂತರ ಪೌರಾಯುಕ್ತರು ತಕರಾರು ಪ್ರಕರಣ ದಾಖಲಿಸುತ್ತಾರೆ ಎಂದರೆ ಸರಿ. ಆನಂತರ ಎಲ್ಲರಿಗೂ ನೋಟೀಸು ಹೋಗುತ್ತದೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾನು ಹಾಜರಾಗುತ್ತಿದ್ದೆ. ಅದರಲ್ಲಿ ಈ ಪ್ರಕರಣದ ತೀರ್ಮಾನಕ್ಕೆ ಬದ್ಧ ಇರಬೇಕೆಂದು ವೀಲೆ ಆಗಿದೆ.

ದಾವಾ ಸ್ವತ್ತಿನಲ್ಲಿ ನನಗಾಗಲೀ ಮತ್ತು 3 ರಿಂದ 5 ನೇ ಪ್ರತಿವಾದಿಯರಿಗೆ ಯಾವುದೇ ರೀತಿಯ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ ಅಲ್ಲ. ನಿವೇಶನ ಖರೀದಿಸಲು ನಾನು ಮತ್ತು 3 ರಿಂದ 5 ನೇ ಪ್ರತಿವಾದಿಯರು ಯಾವುದೇ ಹಣ ನೀಡಿಲ್ಲ ಎಂದರೆ ಸರಿ ಅಲ್ಲ.

ದಾನಪತ್ರದ ಆಧಾರದ ಮೇಲೆ ದಾವಾ ಸ್ವತ್ತು 2 ನೇ ಪ್ರತಿವಾದಿಯ ಹೆಸರಲ್ಲಿ ಮ್ಯೂಟೇಶನ ಆಗಿದೆ ಎಂದರೆ ಸರಿ ಅಲ್ಲ. ನಾವು ಈಗಾಗಲೇ ಅಸಲು ದಾವಾ ನಂ. 53/2008 ರಲ್ಲಿ ನಮಗೆ ಬರಬೇಕಾದ ಭಾಗದ ಬದಲಿಗೆ ಹಣ ಪಡೆದುಕೊಂಡಿದ್ದರಿಂದ ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ರೀತಿಯ ಭಾಗ ಇರುವುದಿಲ್ಲ ಎಂದರೆ ಸರಿ ಅಲ್ಲ.

2 ನೇ ಪ್ರತಿವಾದಿಯು ನಮ್ಮ ತಂದೆ ತಾಯಿಯನ್ನು ನೋಡಿಕೊಂಡಿದ್ದರಿಂದ ಅವರು ಪ್ರೀತಿ, ವಿಶ್ವಾಸದಿಂದ ದಾವಾ ಸ್ವತ್ತನ್ನು ಆತನಿಗೆ ದಾನ ಮಾಡಿದ್ದಾರೆ ಎಂದರೆ ಸರಿ ಅಲ್ಲ. 2014 ನೇ ಸಾಲಿನಲ್ಲಿ ದಾನಪತ್ರದ ಬಗ್ಗೆ ಗೊತ್ತಾದ ನಂತರ ಈ ದಾವೆ ಸಲ್ಲಿಸಿದ್ದೇವೆ

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣ ಕಂಡುಬರದಿದ್ದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಿ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.